ಈ) ಖಾನಾಪುರ ಹಾಗೂ ರಾಮನಗರಗಳಲ್ಲಿ ತರಬೇತಿ ಕೇಂದ್ರಗಳಿದ್ದು, ಕೌಶಲ್ಯ ಅಭಿವೃದ್ಧಿಯ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಎಲ್ಲಾ ಕಸುಬುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಮನ್ ಫೆಸಿಲಿಟೀಸ್ ಗಳನ್ನು ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿ ಒದಗಿಸಲು ಸಂಘ: ಸಂಸ್ಥೆಗಳ ಮುಖಾಂತರ ಕ್ರಮ ವಹಿಸಲಾಗುತ್ತಿದೆ.

ಉ) ಕುಂಬಾರಿಕೆ ಕಲೆ ಜೀವಂತವಾಗಿಡಲು ಅನುಕೂಲವಾಗುವಂತೆ ಸರ್ಕಾರವು ಈ ಕೆಳಕಂಡ ನಿಗಮ: ಮಂಡಲಿಗಳಿಂದ ಧನ ಸಹಾಯ ಸೌಲಭ್ಯಗಳನ್ನು ನೀಡುತ್ತಿದೆ.

1. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ

2. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

3. ರಾಜ್ಯ ಹಣಕಾಸು ಸಂಸ್ಥೆ, ಮತ್ತು

4. ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ (ನಿ) ಇವುಗಳಿಂದ ಧನಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ನಾಗಮಂಗಲ ಟೌನ್ ಪಂಚಾಯತಿಯ ಹಳೇ ವಾಣಿಜ್ಯ ಕಟ್ಟಡಗಳು ಶಿಥಿಲದ ಕುರಿತು

250 (508) ಶ್ರೀ ಎಸ್. ಚಲುವರಾಯ ಸ್ವಾಮಿ (ನಾಗಮಂಗಲ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಾಗಮಂಗಲ ಟೌನ್ ಪಂಚಾಯತಿಯ ಹಳೇ ವಾಣಿಜ್ಯ ಕಟ್ಟಡಗಳು ತುಂಬಾ ಶಿಥಿಲವಾಗಿದೆ ಹಾಗೂ ರಸ್ತೆ ಹಾಗೂ ಒಳಚರಂಡಿ ವ್ಯವಸ್ಥೆ ಹದಗಡಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

2. ಬೆಳ್ಳೂರು ಗ್ರಾಮ ಪಂಚಾಯಿತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದೊಂದು ವ್ಯಾಪಾರ ಕೇಂದ್ರವಾಗಿದ್ದು ಜನಸಂಖ್ಯೆ ಸುಮಾರು 15,000 ಕ್ಕೂ ಮೇಲ್ಪಟ್ಟಿದ್ದು ಈ ಗ್ರಾಮಪಂಚಾಯಿತಿಯನ್ನು ಟೌನ್ ಪಂಚಾಯಿತಿಗೆ ಪರಿವರ್ತನೆ ಮಾಡಬೇಕೆಂಬ ಮನವಿ ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಟೌನ್ ಪಂಚಾಯಿತಿಯನ್ನಾಗಿ ಯಾವಾಗ ಪರಿವರ್ತನೆ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಮಂತ್ರಿಗಳು)

1. ಈ ಬಗ್ಗೆ ಪ್ರಸ್ತಾವನೆಯು ಪೌರಾಡಳಿತ ನಿರ್ದೇಶಕರವರಿಂದ ಬರುವುದು ಬಾಕಿ ಇರುತ್ತದೆ.

2. ಪ್ರಸ್ತಾವನೆ ಬಂದಿಲ್ಲ. ಜಿಲ್ಲಾಧಿಕಾರಿಗಳಿಂದ ಈ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಜನಗಣತಿ ನಿರ್ದೇಶನಾಲಯದ ನಿರ್ಬಂಧ ತೆರವಾದ ನಂತರ (31-3-2001 ರ ನಂತರ) ಪರಿಶೀಲಿಸಲಾಗುವುದು.